(ಇಂದು ದಿನಾಂಕ 07-02-2020 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ ಡಿ.ಎಸ್.ಭಟ್ಟ ವಕೀಲರಿಂದ-**

ನಾನು ಈಗಾಗಲೇ ಕೆಲವು ದಾಖಲಾತಿಗಳ ನೋಟರಿ ಪ್ರತಿಗಳನ್ನು ಹಾಜರುಪಡಿಸಿದ್ದು , ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದ್ರಿ ದಾಖಲಾತಿಗಳ ಅಸಲು ಪ್ರತಿಗಳನ್ನು ಪರಿಶೀಲಿಸಿ , ತಾಳೆನೋಡಿ ಅಸಲು ಪ್ರತಿಗಳನ್ನು ಮುಂದಿನ ಸಾಕ್ಷ್ಯ ವಿಚಾರಣೆಯ ಸಮಯ ಹಾಜರುಪಡಿಸುವ ಷರತ್ತಿನ ಮೇರೆಗೆ ಸಾಕ್ಷಿದಾರರಿಗೆ ವಾಪಸ್ ನೀಡಿ ಸದ್ರಿ ನೋಟರಿ ಪ್ರತಿಗಳನ್ನು ಈ ಕೆಳಕಂಡಂತೆ ನಿಶಾನೆಯನ್ನಾಗಿ ಗುರುತಿಸಲಾಗಿದೆ.

ನಿಶಾನೆ ಪಿ. 3 – ಭೂಪರಿವರ್ತನೆ ಆದೇಶ ದಿನಾಂಕ 19-08-2005 ರ ನೋಟರಿ ಪ್ರತಿ.

ನಿಶಾನೆ ಪಿ. 4 –ಇಲಾಖೆಯವರು ನೀಡಿದ NOC ಪತ್ರ ದಿನಾಂಕ 02-07-2015 ಇದರ ನೋಟರಿ ಪ್ರತಿ

ನಿಶಾನೆ ಪಿ. 5 – ಪುರಾತತ್ವ ಇಲಾಖೆಯವರು ನೀಡಿರುವ ಅನುಮತಿ ಪತ್ರ ದಿನಾಂಕ 07-01-2016 ರ ನೋಟರಿ ಪ್ರತಿ

ನಿಶಾನೆ ಪಿ. 6 – ಪಂಚಾಯತಿಯವರು ನೀಡಿರುವ ಅನುಮತಿ ಪತ್ರ ದಿನಾಂಕ 03-03-2016 ರ ನೋಟರಿ ಪ್ರತಿ

ನಿಶಾನೆ ಪಿ. 7 – ಕಟ್ಟಡದ ನೀಲಿ ನಕಾಶೆಯ ನೋಟರಿ ಪ್ರತಿ

ನಿಶಾನೆ ಪಿ. 8 – ಲೋಕೋಪಯೋಗಿ ಇಲಾಖೆಯವರು ನೀಡಿದ ಅನುಮತಿ ಪತ್ರ ದಿನಾಂಕ 08-06-2016 ರ ನೋಟರಿ ಪ್ರತಿ

ನಿಶಾನೆ ಪಿ. 9 – ಪ್ರತಿವಾದಿ ಪಂಚಾಯತ ನೀಡಿದ ನೋಟಿಸು ದಿನಾಂಕ 09-01-2018 ರ ಅಸಲು ಪ್ರತಿ

ನಿಶಾನೆ ಪಿ. 10 – ಸದ್ರಿ ನೋಟಿಸಿಗೆ ವಾದಿ ನೀಡಿದ ಉತ್ತರದ ಸ್ವೀಕೃತ ಪ್ರತಿ

ನನ್ನ ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ದಾವೆಯಲ್ಲಿ ಕೇಳಿರುವಂತೆ ಆದೇಶವಾಗಲು ಪ್ರಾರ್ಥನೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ